ಶಹಬಾದ್ ನಗರದಲ್ಲಿ ಮೇಲ್ಮಟ್ಟದ ಸೇತುವೆಯನ್ನು ಕಟ್ಟುವುದರ ಬಗ್ಗೆ

ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಶಹಬಾದ್ ನಗರವು ಸುಮಾರು ೫೦,೦೦೦ ಜನ ಸಂಖ್ಯೆಯಿರುವ ನಗರವಾಗಿದ್ದು ಸಾವಿರಾರು ಸಿಮೆಂಟ್ ಮತ್ತು ಕಲ್ಲುಗಳನ್ನು ಹೊತ್ತ ಲಾರಿಗಳು ಶಹಬಾದ್ ಲೆವೆಲ್ ಕ್ರಾಸಿಂಗ್ ರೈಲುಗಳ ಓಡಾಟದಿಂದ ಅದು ಆಗಾಗ್ಗೆ ಬಂದ್ ಆಗುತ್ತಿದ್ದು ಲಾರಿಗಳನ್ನು ಓಡಾಡಿಸುವುದಕ್ಕೆ ತೊಂದರೆಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಅಲ್ಲಿ ಸರಕಾರದವರು ಮೇಲ್ಮಟ್ಟದ ಸೇತುವೆಯನ್ನಾದರೂ ಕಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಬಂದಿದೆ.

(ಆ) ಈ ವಿಚಾರದಲ್ಲಿ ರೈಲ್ವೆ ಇಲಾಖೆಯವರೊಡನೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ, ತಾಂತ್ರಿಕ ವಿವರಗಳನ್ನು ಅವರಿಗೆ ಕಳುಹಿಸಿಕೊಡಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ೨೯-೭-೧೯೮೫ರಲ್ಲಿ ಜಾಯಿಂಟ್ ಸರ್ವೆ ಮಾಡಬೇಕೆಂದು ನಾವು ರೈಲ್ವೆ ಇಲಾಖೆಗೆ ಪತ್ರ ಬರೆದು, ಅದರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಎರಡೂ ಕಡೆ ಎಂಬ್ಯಾಂಕ್‌ಮೆಂಟ್ ಹಾಕಲಿಕ್ಕೆ ೪೮ ಲಕ್ಷ ರೂಪಾಯಿಗಳಂತೆ ಖರ್ಚಾಗುತ್ತದೆ. ಬ್ರಿಡ್ಜ್ ಎಸ್ಟಿಮೇಟ್ ಅವರು ತಯಾರು ಮಾಡುತ್ತಾರೆ. ಅದನ್ನು ರೈಲ್ವೆ ಅಥಾರಿಟಿಯವರು ಮಾಡಬೇಕು. ನಾವು ಮಾಡಲಿಕ್ಕೆ ಸಾಧ್ಯವಿಲ್ಲ. ಆವರೇನೂ ಎಸ್ಟಿಮೇಟ್ ಕಳುಹಿಸಿಕೊಟ್ಟಿಲ್ಲ. ಅದು ಎಷ್ಟಾಗುತ್ತದೆಂದೂ ನಮಗೆ ಗೊತ್ತಿಲ್ಲ. ತಾಂತ್ರಿಕವಾತಿಗಳು ನಮ್ಮಿಂದ ಅವರೇನು ಕೇಳಿದ್ದರು ಅದನ್ನು ಒದಗಿಸಿಕೊಟ್ಟಿದ್ದೇವೆ.

ಶ್ರೀ ಕೆ. ಬಿ. ಶಾಣಪ್ಪ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನು ಹೇಳಿದರು ಅದು ನಿಜ. ಆದರೆ ೧೯೮೪ರಲ್ಲಿ ಮಾನ್ಯ ಮುಖ್ಯ ಮಂತ್ರಿಯವರೂ ಸಹ ಇದರ ಬಗ್ಗೆ ರೈಲ್ವೆ ಸಚಿವರಾಗಿದ್ದ ಮಾನ್ಯ ಘನೀಖಾನ್ ಚೌಧರಿಯವರಿಗೆ ಪತ್ರ ಬರೆದಿದ್ದರು ಎಂಬುದನ್ನು ನಾನು ಡಿಮ್ಯಾಂಡ್ ಮೇಲೆ ಮಾತನಾಡುವಾಗ ಹೇಳಿದ್ದೇನೆ. ಮಾನ್ಯ ಮಂತ್ರಿಗಳು ೧೯೮೫-೮೬ರಲ್ಲಿ ಏನಾದರೂ ಮಾಡಿ ಸಹಾಯ ಮಾಡೋಣ ಎಂದು ಹೇಳಿದ್ದರು. ೧೯೭೫ ರಿಂದ ಇದರ ಎಸ್ಟಿಮೇಟ್ ಮಾಡುವುದು ಮತ್ತೊಂದು ಎಲ್ಲಾ ನಡೆದಿದೆ. ಇಲ್ಲಿಗೆ ೧೦ ವರ್ಷ ಆಯಿತು. ಆದರೂ ಇದುವರೆಗೂ ಆಗಲಿಲ್ಲ. ಇದು ಬಹಳ ಮುಖ್ಯವಾದ ರೋಡ್. ತಾವು ಬಹಳ ಮುಖ್ಯವಾಗಿ, ಇದಕ್ಕೆ ಬೈಪಾಸ್ ರೋಡ್ ಮಾಡುವುದಕ್ಕಾದರೂ ಕ್ರಮ ತೆಗೆದುಕೊಳ್ಳಿ, ಇದು ೮೬ ಲಕ್ಷ ರೂಪಾಯಿಗಳ ಯೋಜನೆ. ನಾನು ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳಿಗೆ ಹೇಳುವುದು ಇಷ್ಟೆ, ತಾವು ಬೈಪಾಸ್ ರೋಡ್ ಮಾಡುವುದು ಲೇಟ್ ಮಾಡಿದಹಾಗೆ. ಅಲ್ಲಿರತಕ್ಕ ಜಮೀನನ್ನು ಎನ್‌ಕ್ರೋಚ್‌ಮೆಂಟ್ ಮಾಡುತ್ತಿದ್ದಾರೆ. ಬ್ರಿಡ್ಜ್ ಕೆಲಸ ತೆಗೆದುಕೊಳ್ಳುವುದರ ಒಳಗೆ ಅಲ್ಲಿ entire ಜಾಗದಲ್ಲಿ houses will be constructed there. ಆದಕಾರಣ ದಯವಿಟ್ಟು ಈ ಬೈಪಾಸ್ ರೋಡ್ ನಿರ್ಮಾಣ ಕಾರ್ಯಕ್ಕೆ ಸ್ಪೆಷಲ್ ಗ್ರಾಂಟ್ ಕೊಟ್ಟು ಕೆಲಸ ಪ್ರಾರಂಭ ಮಾಡಲಿಕ್ಕೆ ಸಹಾಯ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತಿದೆ, ಬ್ರಿಡ್ಜ್ ಆಗುವುದಕ್ಕೆ ಮೊದಲು, ಅದರ ಆ ಕಡೆ ಈ ಕಡೆ ಬೈಪಾಸ್ ರೋಡ್ ಮಾಡಿಸಿ ಎಂಬುದು ಅವರು ಹೇಳುವುದರ ಅರ್ಥ ಎಂದು ಕಾಣುತ್ತದೆ. ಈ ಓವರ್ ಬ್ರಿಡ್ಜ್ ಯಾವ ವರ್ಷ ಆಗುತ್ತದೆ ಎಂಬುದು ನಮಗೆ ಗೊತ್ತಾಗಬೇಕಲ್ಲವೆ ? ರೈಲ್ವೆ ಇಲಾಖೆಯವರು ಅದನ್ನು ಮಾಡಬೇಕು. ನಾವೂ ರೈಲ್ವೆ ಇಲಾಖೆಯ ಮೇಲೆ ಪ್ರೆಜರ್ ಹಾಕಿದ್ದೇವೆ, ಪತ್ರ ಬರೆದಿದ್ದೇವೆ. ೧೯೮೪-೮೫ರಲ್ಲಿ ಇದು ಏನಾದರೂ ಆದರೆ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಇದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ರೈಲ್ವೆ ಇಲಾಖೆಯವರು ಹೇಳಿದ್ದರೂ ಸೇರಿಸಲಿಲ್ಲ. ಈ ವರ್ಷ ಕೂಡಾ ಸೇರಿಸಲಿಲ್ಲ. ಆವರು

ಯಾವಾಗ ಇದನ್ನು ಸೇರಿಸುತ್ತಾರೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಅವರ ಮೇಲೆ ನಾವು ತುಂಬಾ ಒತ್ತಡ ತರಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆ ಕಡೆ ಈ ಕಡೆ ಬೈಪಾಸ್ ರೋಡ್ ಮಾಡುವುದಕ್ಕೆ ಹಣ ಇನ್‌ವೆಸ್ಟ್ ಮಾಡಿ, ಆ ಜಾಗದಲ್ಲಿ ಮನೆ ಕಟ್ಟಿಕೊಳ್ಳುತ್ತಾರೆ, ಭೂಮಿ ಹೊಗುತ್ತದೆ ಅದರಿಂದ ಇದನ್ನು ಮಾಡಿ ಎಂದು ಹೇಳುತ್ತಿದ್ದಾರೆ, ಅದನ್ನು ಪರಿಶೀಲನೆ ಮಾಡಬಹುದು, ಆದರೂ ನಾವು ಪೂರ್ಣವಾಗಿ ಹಣ ಇನ್‌ವೆಸ್ಟ್ ಮಾಡುವುದು ಕಷ್ಟವಾಗುತ್ತದೆ. ರೈಲ್ವೆ ಇಲಾಖೆಯ ಮೇಲೆ ತರದೂರು ಮಾಡಿ, ಇದನ್ನು ಆದಷ್ಟು ಬೇಗ ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡುತ್ತದೆ ಎಂದು ಹೇಳುತ್ತೇನೆ.

ಚಿಂಚೋಳಿ ತಾಲ್ಲೂಕಿನಲ್ಲಿಯ ರಸ್ತೆಗಳ ವಿಚಾರ ಕುರಿತು

ಶ್ರೀ ಬಿ. (ಲೆಹಿ)ಶ್ರೀ ವೀರಯ್ಯಸ್ವಾಮಿ (ಚಿಂಚೋಳಿ) — ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ;

(ಅ) ಚಿಂಚೋಳಿ ತಾಲ್ಲೂಕನ್ನು ಬೇರೆ ತಾಲ್ಲೂಕಿನೊಂದಿಗೆ ಸೇರಿಸುವ ರಾಜ್ಯ ಹೆದ್ದಾರಿ ಜಿಲ್ಲಾ ಮುಖ್ಯ ರಸ್ತೆ ಮತ್ತು ಇತರ ರಸ್ತೆಗಳ ಸಂಖ್ಯೆ ಮತ್ತು ಅವುಗಳ ಉದ್ದವೆನು ;

(ಆ) ಅದರಲ್ಲಿ ಟಾರು ಮಾಡಿರುವ ಮತ್ತು ಜಲ್ಲಿ ಹಾಕಿದ ರಸ್ತೆಗಳ ಸಂಖ್ಯೆ ಎಷ್ಟು ;

(ಇ) ಅವುಗಳಲ್ಲಿ ಯಾವುದಕ್ಕಾದರೂ ಯಾವಾಗಲಾದರೂ ಮರು ಟಾರು ಮಾಡಲಾಗಿದೆಯೆ ;

(ಈ) ರಸ್ತೆಗಳನ್ನು ಟಾರು ಮಾಡಲು ಯಾವುದಾದರೂ ಪ್ರಸ್ತಾವನೆ ಇದೆಯೆ ; ಹಾಗಿದ್ದಲ್ಲಿ ಅವುಗಳನ್ನು ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ಚಿಂಚೋಳಿ ತಾಲ್ಲೂಕನ್ನು ಬೇರೆ ತಾಲ್ಲೂಕಿನೊಂದಿಗೆ ಸೇರಿಸುವ ವಿವಿಧ ವರ್ಗಗಳ ರಸ್ತೆಗಳು ಉದ್ದ ಮತ್ತು ಸಂಖ್ಯೆ ಇವುಗಳ ವಿವರ ಈ ಕೆಳಕಂಡಂತಿದೆ.—

ರಸ್ತೆಗಳ ವರ್ಗ	ರಸ್ತೆಗಳ ಸಂಖ್ಯೆ	ಉದ್ದ (ಕಿ.ಮೀ.ನಲ್ಲಿ)
ರಾಜ್ಯ ಹೆದ್ದಾರಿ	೧	೪೭.೬೦
ಜಿಲ್ಲಾ ಮುಖ್ಯ ರಸ್ತೆ	೨	೪೮.೦೦
ಜಿಲ್ಲಾ ಇತರೇ ರಸ್ತೆ	೧	೧೫.೩೦
ಹಳ್ಳಿಗಾಡು ರಸ್ತೆ	೭	೪೯.೬೦
ಒಟ್ಟು	೧೧	೧೬೨.೫೦

(ಆ) ಟಾರು ಮತ್ತು ಜಲ್ಲಿ ರಸ್ತೆಗಳ ವಿವಿಧ ವರ್ಗಗಳ ಸಂಖ್ಯೆ ಈ ಕೆಳಕಂಡಂತಿದೆ.—

ರಸ್ತೆಗಳ ವರ್ಗ	ಟಾರು ರಸ್ತೆ		ಜಲ್ಲಿ ರಸ್ತೆ	
	ರಸ್ತೆಗಳ ಸಂಖ್ಯೆ	ಉದ್ದ (ಕಿ.ಮೀ.)	ರಸ್ತೆಗಳ ಸಂಖ್ಯೆ	ಉದ್ದ (ಕಿ.ಮೀ.)
ರಾಜ್ಯ ಹೆದ್ದಾರಿ	೧	೩೨.೫೦	—	೧೫.೧೦
ಜಿಲ್ಲಾ ಮುಖ್ಯ ರಸ್ತೆ	೧	೨೮.೦೧	೧	೨೦.೦೦
ಜಿಲ್ಲಾ ಇತರೇ ರಸ್ತೆ	೨	೧೫.೩೦	—	—
ಹಳ್ಳಿಗಾಡು ರಸ್ತೆ	—	—	೩	೨೨.೪೦
ಒಟ್ಟು	೩	೭೫.೮೦	೪	೫೭.೫೦